# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ–49, ರಾಜರಾಜೇಶ್ವರಿ ನಗರ (ಹಳೆ ವಾರ್ಡ್ ಸಂಖ್ಯೆ.160) ರಲ್ಲಿ ದಿನಾಂಕ: 03.12.2022 ರಂದು, ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು

ಡಿಸೆಂಬರ್–2022 ಮಾಹೆಯ ಮೊದಲನೇ ಶನಿವಾರದ **ವಾರ್ಡ್** ಸಮಿತಿ ಸಭೆಯನ್ನು ದಿನಾಂಕ: 03.12.2022 ರಂದು ನಡೆಸಲಾಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು

**ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

1. ಅರುಣ್ ಭಾಸ್ಕರ್ ರವರು BEML 5ನೇ ಹಂತದ ನಯನ ಸ್ಪಿರಿಟ್ಸ್ MRP ಯ ಅಂಗಡಿಯ ಹತ್ತಿರ ಪ್ಲಾಸ್ಟಿಕ್ ಲೋಟಗಳನ್ನು ತುಂಬಾ ಉಪಯೋಗಿಸುತ್ತಿದ್ದು, ಉಪಯೋಗಿಸುತ್ತಿರುವ ಪ್ಲಾಸ್ಟಿಕ್ ಗ್ಲಾಸ್ಗಳನ್ನು ರಸ್ತೆಯ ಬದಿ ವಿಲೇವಾರಿ ಮಾಡುತ್ತಿದ್ದಾರೆ. Marshal's ರವರು ಈಗಾಗಲೇ ಮೂರು ಬಾರಿ ದಂಡ ವಿಧಿಸಿದ್ದರೂ, ಪ್ಲಾಸ್ಟಿಕ್ ಲೋಟಗಳನ್ನು ಉಪಯೋಗಿಸುತ್ತಿದ್ದಾರೆ. ಆದ್ದರಿಂದ ಅವರಿಗೆ ವಿಧಿಸುವ ದಂಡದ ಮೊತ್ತವನ್ನು ಹೆಚ್ಚಿಸುವುದಾಗಿ ಹೇಳಿದರು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರಾದ ಸೌಮ್ಯರವರು ಹಿರಿಯ ಆರೋಗ್ಯ ನಿರೀಕ್ಷಕರಿಗೆ ತಿಳಿಸಿ ನೋಟೀಸ್ ಕೊಡಿಸುವುದಾಗಿ ತಿಳಿಸಿದರು.

2. ನವೀನ್.ಡಿ.ಆರ್ ಶಶಿಧರ್ ಬಡಾವಣೆಯ ನಿವಾಸಿ ಚನ್ನಸಂದ್ರದ ನೈಸ್ ರೋಡ್ ಹತ್ತಿರ ಒಂದೇ ಸೇತುವೆ ಇದ್ದು, ಒಂದೇ ಸೇತುವೆಗೆ ಎರಡು ರಸ್ತೆ ಸಂಪರ್ಕವಿದ್ದು, ರಸ್ತೆಯಲ್ಲಿ ತುಂಬಾ ಟ್ರಾಫಿಕ್ ಜಾಮ್ ಆಗುತ್ತಿದ್ದು ಅದರಿಂದ ಬಾರಿ ತೊಂದರೆಯುಂಟಾಗುತ್ತಿದೆ. ಅದೇ ರಸ್ತೆಯಲ್ಲಿ ತುಂಬಾ ರಸ್ತೆಯ ಗುಂಡಿಗಳಿದ್ದು ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು ತುರ್ತಾಗಿ ರಸ್ತೆ ಗುಂಟಿಗಳನ್ನು ಮುಚ್ಚುವಂತೆ ಕೋರಿದರು. ಇದಕ್ಕೆ ಉತ್ತರಿಸಿದ ಸಹಾಯಕ ಅಭಿಯಂತರರಾದ ಶ್ರೀ.ಸಿದ್ದರಾಮಯ್ಯ ನವರು ರಸ್ತೆಯ ಗುಂಡಿಗಳನ್ನು ಮುಚ್ಚುವುದಾಗಿ ಹೇಳಿದರು. ಹಾಗೂ ಸೇತುವೆಯ ಅಗಲವನ್ನು ವಿಸ್ತರಿಸುವ ವಿಷಯಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ಕೇಂದ್ರ ಕಛೇರಿಯಲ್ಲಿರುವ ಮುಖ್ಯರಸ್ತೆಗಳ ವಿಭಾಗಕ್ಕೆ ಮನವಿಯನ್ನು ಸಲ್ಲಿಸಲು ತಿಳಿಸಿದರು.

3. ರಾಜರಾಜೇಶ್ವರಿನಗರದ ಜಯಣ್ಣ ಸರ್ಕಲ್ ನ ಹತ್ತಿರ ಹೊಸದಾಗಿ ಕಟ್ಟಡಗಳನ್ನು ನಿರ್ಮಿಸುತ್ತಿದ್ದು. ರಸ್ತೆಯವರೆಗೆ ರ್ಯಾಂಪ್ ನಿರ್ಮಿಸಿಕೊಂಡಿದ್ದು ಇದರಿಂದ ಮಳೆ ನೀರು ರಸ್ತೆಯಲ್ಲಿ ಹರಿಯುತ್ತಿದೆಯೆಂದು ದೂರು ನೀಡಿದರು.

4. Dr.ಕಲ್ಪನ ಮತ್ತು ಜ್ಯೋತಿ ರವರು ರಾಜರಾಜೇಶ್ವರಿನಗರದಲ್ಲಿ ಫ್ಲೆಕ್ಸ್ ಹಾಗೂ ಬ್ಯಾನರ್ ಗಳನ್ನು ಎಲ್ಲೆಡೆ ಅಳವಡಿಸಿರುವುದಾಗಿ ದೂರು ನೀಡಿದರು. ಇದಕ್ಕೆ ಉತ್ತರಿಸಿದ ವಾರ್ಡ್ ಅಭಿಯಂತರರು ಕಂದಾಯಾಧಿಕಾರಿಗಳ ಗಮನಕ್ಕೆ ತಂದು ಫ್ಲೆಕ್ಸ್ ತೆರವುಗೊಳಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.

5. ಬೀದಿ ಬದಿ ವ್ಯಾಪಾರಿಗಳು ಪ್ಲಾಸ್ಟಿಕ್ ಕವರ್‌ಗಳನ್ನು ತುಂಬಾ ಉಪಯೋಗಿಸುತ್ತಿದ್ದಾರೆ ಎಂದು ಸಾರ್ವಜನಿಕರು ದೂರು ನೀಡಿದರು.

6. ಕೆಂಚೇನಹಳ್ಳಿ ನಿವಾಸಿಯಾದ ಶ್ರೀ ಸುರೇಶ್ ರವರು ರಸ್ತೆಯಲ್ಲಿ ಕಸ ಹಾಕುವವರಿಗೆ ಎಷ್ಟು ಜನಕ್ಕೆ ದಂಡ ವಿಧಿಸಿದ್ದೀರ ಎಂದು ಪ್ರಶ್ನಿಸಿದರು. ಕೆಂಪೇಗೌಡ ಕ್ರೀಡಾಂಗಣದ ಹತ್ತಿರ ಜನರು ಕಸವನ್ನು ರಸ್ತೆಗೆ ಎಸೆಯುತ್ತಿದ್ದಾರೆ. ವಾರ್ಡ್ ಸಮಿತಿ ಸದಸ್ಯರು ಆ ಕಸದಲ್ಲಿ ಕಸ ಎಸೆದಿರುವವರ  ಸುಳಿವು ಅಂದರೆ ಅವರ ಫೋನ್ ನಂಬರ್, ವಿಳಾಸ ಸಿಗುವುದೋ ಎಂದು ಪರಿಶೀಲಿಸಿ ಮಾಹಿತಿ ಒದಗಿಸಲು ಶ್ರಮ ವಹಿಸುತ್ತಿದ್ದೇವೆ ಎಂದು ಹೇಳಿದರು.

7. ವಾರ್ಡ್ ಸಮಿತಿ ಸದಸ್ಯರೋರ್ವರು ಪ್ರತಿ ರಸ್ತೆಯಲ್ಲಿ ಕಸ ಹಾಕುವುದಕ್ಕೆ ಒಂದು ಖಾಲಿ ನಿವೇಶನವನ್ನು ಗುರುತಿಸಿ ಅಲ್ಲಿಂದ ಕಸ ಸಂಗ್ರಹಿಸಿದರೆ ಬ್ಲಾಕ್ ಸ್ಪಾಟ್ ಸಮಸ್ಯೆ ಕಡಿಮೆ ಯಾಗಬಹುದೆಂದು ಸಲಹೆ ನೀಡಿದರು. ಅದಕ್ಕೆ ಸಹಾಯಕ ಅಭಿಯಂತರರಾದ ಸಿದ್ದರಾಮಯ್ಯನವರು ಮನೆಯ ಬಾಗಿಲಿಗೆ ಕಸದ ಗಾಡಿ ಹೋದರೆ ಜನರು ಕಸ ಹಾಕುವುದಕ್ಕೆ ಹಿಂಜರಿಯುತ್ತಾರೆ. ಖಾಲಿ ನಿವೇಶನದಲ್ಲಿ ಕಸ ವಿಲೇವಾರಿ ಮಾಡಲು ತಿಳಿಸಿದರೆ ಹೆಚ್ಚಿನ ರೀತಿಯಲ್ಲಿ ಮಾಲಿನ್ಯ ಉಂಟಾಗಲಿದೆ ಎಂದು ತಿಳಿಸಿದರು.

8. ವಾರ್ಡ್ ಸಮಿತಿ ಸದಸ್ಯರು ಕೆಂಪೇಗೌಡ ಕ್ರೀಡಾಂಗಣದಲ್ಲಿ ಇಂಟರ್ ನ್ಯಾಷನಲ್ ಶಾಲೆ ತೆರದಲ್ಲಿ ಮಕ್ಕಳಿಗೆ ಆಟವಾಡಲು ಕ್ರೀಡಾಂಗಣ ಇಲ್ಲವಾದಂತಾಗುತ್ತದೆ ಸದರಿ ವಿಷಯವಾಗಿ ಮಾನ್ಯ ವಲಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಯಾವ ತೀರ್ಮಾನ ಕೈಗೊಳ್ಳಲಾಗುತ್ತದೆಯೆಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ವಾರ್ಡ್ ಅಭಿಯಂತರರು ಯೋಜನಾ ವಿಭಾಗದ ಅಭಿಯಂತರರಿಗೆ ಕರೆ ಮಾಡಿ ಪ್ರಶ್ನಿಸಲಾಗಿ ಟೆಂಡರ್ ರದ್ದತಿ ಆಗಿಲ್ಲ ಆದರೆ ಅದು ಸ್ಥಳ ಬದಲಾವಣೆ ಆಗಿದೆ ಎಂದು ತಿಳಿಸಿದರು. ಹಾಗೂ ವಲಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಸಭಾ ನಡವಳಿಗಳನ್ನು ಒದಗಿಸುವಂತೆ ಕೋರಿದರು.

9. ಶ್ರೀಮತಿ ಸವಿತಾ ಭಟ್ ವಾರ್ಡ್ ಸಮಿತಿ ಸದಸ್ಯರು ಕೋವಿಡ್ ಸಾಂಕ್ರಾಮಿಕ ರೋಗದಿಂದ ಮಕ್ಕಳೆಲ್ಲ ಮಾನಸಿಕ ಒತ್ತಡ ಹಾಗೂ ಖಿನ್ನತೆಗೆ ಒಳಪಟ್ಟಿದ್ದಾರೆ. ಮಕ್ಕಳು ದೈಹಿಕವಾಗಿ ಆರೋಗ್ಯವಾಗಿ  ಇರಲು ಆಟದ ಮೈದಾನ ಬೇಕೆಂದು ಕೋರಿದರು..

10. ಶ್ರೀಮತಿ ಜ್ಯೋತಿ ಎನ್ನುವವರು ಸುದನ್ವ ಆಯುರ್ವೇದಿಕ್ ಸೆಂಟರ್ ನ ಹತ್ತಿರ ಒಳಚರಂಡಿ ಸೋರುತ್ತಿದ್ದು ಹಾಗೂ ತುಂಬಿ ಹರಿಯುತ್ತಿದೆ ಎಂದು ದೂರಿದರು.

11. ಶ್ರೀಮತಿ ಸವಿತಾ ಭಟ್ ಎನ್ನುವವರು ಸುಭಾಷ್ ಭವನದ ಹತ್ತಿರ Swimming pool ನಿರ್ಮಿಸುವ ಕಾಮಗಾರಿಗೆ ಸಂಬಂಧಪಟ್ಟ ದಾಖಲೆಗಳು ಬೇಕೆಂಬುದನ್ನು ಹೇಳಿದರು.

12. ಶ್ರೀಮತಿ ಸವಿತಾ ಭಟ್ ಎನ್ನುವವರು ನಮಗೆ ರಾಜರಾಜೇಶ್ವರಿನಗರದಲ್ಲಿ ಸರ್ಕಾರಿ ಜಾಗಗಳು ಎಲ್ಲಿ ಇವೆ ಎಂಬ ದಾಖಲೆಗಳು ಬೇಕೆಂಬುದನ್ನು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ವಾರ್ಡ್ ಅಭಿಯಂತರರು ಕಂದಾಯ ಅಧಿಕಾರಿಗಳ ಗಮನಕ್ಕೆ ತಂದು ಮಾಹಿತಿ ನೀಡಲಾಗುವುದೆಂದು ತಿಳಿಸಿದರು.

13. Dr.ಕಲ್ಪನ ಎನ್ನುವವರು ಬಿಬಿಎಂಪಿ ಜಂಟಿ ಆಯುಕ್ತರ ಕಛೇರಿಯ ಹತ್ತಿರನೇ ರಸ್ತೆ ಅಗೆಯುತ್ತಿದ್ದಾರೆ ಅಧಿಕಾರಿಗಳೆಲ್ಲರು ಏನು ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು. ಅದಕ್ಕೆ ಶ್ರೀ.ಸಿದ್ದರಾಮಯ್ಯ ನವರು ಡಾಂಬು ಹಾಕುವ ಸಮಯದಲ್ಲಿ ರೋಡ್ ರೋಲರ್ ಹೋಗಿದ್ದರಿಂದ ಕುಡಿಯುವ ನೀರಿನ ಸಂಪರ್ಕದ ಪೈಪ್ ಹಾಳಾಗಿರುವುದರಿಂದ ರಸ್ತೆ ಅಗೆಯಲಾಗಿದ್ದು, ಅದನ್ನು ಸರಿ ಪಡಿಸುತ್ತಿದ್ದೇವೆ ಎಂದು ತಿಳಿಸಿದರು.

14. ಸರ್ಕಾರವು "ಮರ ಬೆಳೆಸಿ ಹಸಿರು ಉಳಿಸಿ"ಎಂದು ಘೋಷಿಸಿದ್ದಾರೆ. ನಾವೆಲ್ಲ (ವಾರ್ಡ್ ಸಮಿತಿ ಸದಸ್ಯರು)ಆ ಒಂದು ಘೋಷಣೆಯನ್ನು ಪಾಲನೆ ಮಾಡಿ, ರಸ್ತೆಗಳಲ್ಲಿ ಗಿಡಗಳನ್ನು ನೆಟ್ಟರೆ, ನೀವುಗಳೆಲ್ಲರು(ಬಿಬಿಎಂಪಿ)ಅಧಿಕಾರಿಗಳು ನೆಟ್ಟಿರುವ ಗಿಡಗಳನ್ನು ಕಿತ್ತು ರಸ್ತೆಗಳನ್ನು ಅಗೆಯುತ್ತಿದೀರಿ ಎಂದು ದೂರಿದರು.

15. ವಿಶಾಲ್ ಎನ್ನುವವರು ರಾಜರಾಜೇಶ್ವರಿನಗರದಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ವಾರ್ಡ್ ಸಮಿತಿ ಸದಸ್ಯರ ಸಹಿ ತೆಗೆದುಕೊಳ್ಳಬೇಕು ಎಂದು ಹೇಳಿದರು.

16. ವಿಶಾಲ್ ಎನ್ನುವವರು ಇತ್ತೀಚೆಗೆ ನಡೆದ ಜಂಟಿ ಆಯುಕ್ತರು ಹಾಗೂ ವಲಯ ಆಯುಕ್ತರ ಜೊತೆಗೆ ನಡೆದ ಸಭೆಯ ನಡವಳಿಗಳು ಬೇಕೆಂಬುದನ್ನು ಕೋರಿದರು. ಅದಕ್ಕೆ ಸಹಾಯಕ ಅಭಿಯಂತರರಾದ ಶ್ರೀ.ಸಿದ್ದರಾಮಯ್ಯ ನವರು ಜಂಟಿ ಆಯುಕ್ತರಿಗೆ ಅರ್ಜಿ ಕೊಡುವುದಕ್ಕೆ ಹೇಳಿದರು.

17. ಶ್ರೀ.ಉಮೇಶ್ ಎಂಬುವವರು ಸರ್ಕಾರದ ಮಟ್ಟದ ಅಕ್ರಮ ಸಕ್ರಮ ಯೋಜನೆ ಯಾವಾಗ ಜಾರಿಗೆ ಬರಬಹುದೆಂದು ವಿಚಾರಿಸಿದರು. ಹಾಗೂ ವಸತಿ ಸಮುಚ್ಚಯಗಳ ಸಂಘ ನೋದಾವಣಿ ಪ್ರಕ್ರಿಯೆಗಳ ಬಗ್ಗೆ ತಿಳಿಸಲು ಕೋರಿದರು.

18. ಶ್ರೀ.ಉಮೇಶ್ ಎನ್ನವವರು Construction deviationಗಳ ಲೆಕ್ಕಾಚಾರಗಳು ಹೇಗೆ ಮಾಡುತ್ತೀರಿ ಎಂದು ಕೇಳಿದರು.ಮತ್ತು ಆ ಲೆಕ್ಕಾಚಾರದ ವಿಧಾನವನ್ನು ನಮಗೆ (ವಾರ್ಡ್ ಸಮಿತಿ ಸದಸ್ಯರಿಗೆ)ತಿಳಿಸಬೇಕು ಎಂದು ಕೋರಿದರು.

19. ಶ್ರೀಮತಿ ಸವಿತಾ ಭಟ್ ರವರು ಪ್ಲಾಸ್ಟಿಕ್ ನಿಷೇಧವಿದ್ದರೂ ಬಳಕೆಯಾಗುತ್ತಿರುವುದರ ಬಗ್ಗೆ ಚರ್ಚಿಸಲು ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ.ಮಂಜುನಾಥ್ ರವರು ಹಾಜರಿರುವುದಿಲ್ಲ ಎಂದು ದೂರಿದರು. ಹಾಗೂ ಮುಂದಿನ ಸಭೆಗೆ ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ.ಮಂಜುನಾಥ್ ರವರು ಹಾಜರಿರಬೇಕು ಎಂದು ಹೇಳಿದರು.

20. ಜ್ಞಾನಭಾರತಿ ವಿಶ್ವವಿದ್ಯಾಲಯದ ರಸ್ತೆಯ ಹತ್ತಿರ ರಸ್ತೆಯ ಹಂಪ್ ಗಳು ಎತ್ತರವಾಗಿರುವುದರಿಂದ ವಾಹನಗಳಿಗೆ ಹಾನಿಯಾಗಿ ರಸ್ತೆಯಲ್ಲಿ ಅಪಘಾತಗಳು ಉಂಟಾಗುವ ಸಂಭವವಿರುತ್ತದೆ ಎಂದು ದೂರು ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ವಾರ್ಡ್ ಅಭಿಯಂತರರಾದ ಶ್ರೀ ಸಿದ್ದರಾಮಯ್ಯ ರವರು ಹಂಪ್ ತೆರವುಗೊಳಿಸಲು ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ವಿಭಾಗಕ್ಕೆ ಕೋರಲು ತಿಳಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ–49

ಸಹಿ/-
ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ–49

**ಪ್ರತಿಯನ್ನು:-**

1. ಮಾನ್ಯ ವಲಯ ಆಯುಕ್ತರು ರಾರಾನಗರ ವಲಯ ರವರ ಮಾಹಿತಿಗಾಗಿ.
2. ಮಾನ್ಯ ಜಂಟಿ ಆಯುಕ್ತರು
3. ರಾರಾನಗರ ವಲಯ ರವರ ಮಾಹಿತಿಗಾಗಿ.
4. ಮುಖ್ಯ ಅಭಿಯಂತರರು ರಾರಾನಗರ ವಲಯರವರ ಮಾಹಿತಿಗಾಗಿ.
5. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
6. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
7. ವಾರ್ಡ್ ಸಮಿತಿ ಸದಸ್ಯರುಗಳಿಗೆ.
8. ಕಛೇರಿ ಪ್ರತಿ.